## ಟ್ವೀಟು ಖಾರ


**ಅಕ್ಷಯ್ ಅಕ್ಕಿ**
@ AkshayVandure1
ಕುಮಾರಣ್ಣನ ಆರು ತಿಂಗಳ ಸಾಧನೆಗೆ ಕಾಂಗ್ರೆಸ್ ಕೊಟ್ಟ ಪ್ರಶಸ್ತಿ 'ಕ್ಲರ್ಕ್ ಕುಮಾರಣ್ಣ'. ಮುಲಾಜಿನಲ್ಲಿ ಇದ್ದು ಸಾಂದರ್ಭಿಕ ಶಿಶುವಾಗಿ, ವಿಕ್ಸ್ ಹಚ್ಚಿಕೊಂಡು ಕಣ್ಣೀರ್ ಹಾಕ್ತಾ ಕಾಂಗ್ರೆಸ್ ಕೊಡುತ್ತಿರುವ ಕಿರುಕುಳ ಸಹಿಸಿ ಸರಕಾರ ನಡೆಸುತ್ತಿರುವ ಏಕೈಕ ವ್ಯಕ್ತಿ ಕಲಿಯುಗದ ಕರ್ಣ ನಮ್ಮ 'ಕ್ಲರ್ಕ್ ಕುಮಾರಣ್ಣ'


**ಶಶಿಕುಮಾರ್**
@Ud841g29xxkvx5d
ತಮಿಳು ಮತ್ತು ತೆಲುಗು ಸಿನಿಮಾ ಪ್ರೇಮಿಗಳಂತೆ ಕನ್ನಡ ಚಿತ್ರಪ್ರೇಮಿಗಳು ಅಂಧಾಭಿಮಾನಿಗಳಲ್ಲ ಎಂಬುದು ವಾಸ್ತವ. ಆದರೆ, ಇತ್ತೀಚಿನ ಕೆಲವರ ನಡೆ ಅದನ್ನು ಮೀರಿಸುವಂತಿದೆ. ನೆಚ್ಚಿನ ನಟನನ್ನು ಪ್ರೀತಿಸಬೇಕು, ಗೌರ ವಿಸಬೇಕು. ಅದನ್ನು ಬಿಟ್ಟು ಸಾಯುವುದು ಯಾವ ನ್ಯಾಯ?


**ಮಧುಕರಸ್ವಾಮಿ ವಿ.ಪಿ**
@MadhukumarVP1
ನಮ್ಮ ಮತ ನಮ್ಮನ್ನ ರಕ್ಷಿಸುವಂತಿ ರಬೇಕು, ಪಾಕಿಸ್ತಾನದವರನ್ನಲ್ಲ, ನಮ್ಮ ಮತ ನಮ್ಮ ಸೈನಿಕರನ್ನು ರಕ್ಷಿಸು ವಂತಿರಬೇಕು, ಪಾಕಿಸ್ತಾನದ ಉಗ್ರಗಾಮಿಗಳನಲ್ಲ, ನಮ್ಮ ಮತ ನಮ್ಮ ನಂತರದ ಪೀಳಿಗೆಯ ಭವಿಷ್ಯವಾಗಬೇಕು, ಕಂಟಕವಾಗಬಾರದು.


**ಶರಣಕುಮಾರ್**
@PumpwellSharan
ನಾಪತ್ತೆಯಾದ ಮೀನುಗಾರರು ಮುಸಲ್ಮಾನರು ಆಗಿದ್ರೆ, ಮುಖ್ಯ ಮಂತ್ರಿಗಳು, ಎಲ್ಲ ಸಚಿವರು ಮಲ್ಪೆಯಲ್ಲಿ ಇರುತ್ತಿದ್ದರು ಮತ್ತು ಕಣ್ಣೀರು ಹಾಕುತಿದ್ದರು. ಆದರೆ ನಮ್ಮ ದುಸ್ಥಿತಿ ನಾಪತ್ತೆಯಾದವರು ಹಿಂದುಗಳು.


**ಸುರೇಶ್‌ಕುಮಾರ್**
@nimmasuresh
ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರಿಗೆ ಪ್ರಾಯಶಃ ಪದೇ ಪದೆ ನೆನಪಿಗೆ ಬರುತ್ತಿರುವ ಹಾಡೆಂದರೆ 'ಆಡಿಸುವಾತನ ಕೈ ಚಳಕದಲಿ ಎಲ್ಲಾ ಅಡಗಿದೆ'

ಸಚಿವ ಸ್ಥಾನ ಸಿಕ್ಕಿಲ್ಲವೆಂಬ ಅಸಮಾಧಾನವಿಲ್ಲ: ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಚ್.ಕೆ. ಪಾಟೀಲ್

# ಕೇಂದ್ರ ನಾಯಕರ ಮಾತು ಭಾಷಣಕ್ಕಷ್ಟೇ ಸೀಮಿತ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಹಿಂದಿನ ಸರಕಾರದ ಸಾಧನೆಗಳನ್ನೇ ತಮ್ಮ ಸಾಧನೆ ಎನ್ನುವ ಕೇಂದ್ರದ ನಾಯಕರ ಮಾತುಗಳು ಕೇವಲ ಭಾಷಣ, ಭರವಸೆಗಳಿಗೆ ಸೀಮಿತವಾಗಿದ್ದು, ಬಡವರ ಸಮಸ್ಯೆ ಪರಿಹಾರವಾಗಿಲ್ಲ ಎಂದು ಕೆಪಿಸಿಸಿ ಪ್ರಚಾರ ಸಮಿತಿಯ ನೂತನ ಅಧ್ಯಕ್ಷ ಎಚ್.ಕೆ. ಪಾಟೀಲ್ ಕಿಡಿಕಾರಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಳೆದ ಐದು ವರ್ಷಗಳಲ್ಲಿ ರಾಷ್ಟ್ರದಲ್ಲಿ ಏನೇನು ನಡೆದಿದೆ ಎಂಬುದು ಜನತೆಗೆ ಗೊತ್ತು. ನೀಡಿದ ಭರವಸೆ ರಾಜಕೀಯಕ್ಕೆ ಮಾತ್ರ ಸೀಮಿತ ವಾಗಿವೆ. ಆಸೆ, ಕನಸನ್ನು ಮೂಡಿಸಲಾಗಿದ್ದು, ಪ್ರಾಮಾಣಿಕವಾಗಿ ಯಾವುದು ಅನುಷ್ಠಾನ ವಾಗಿಲ್ಲ, ಇದರಿಂದ ಜನರು ಕಷ್ಟ ಅನುಭವಿ ಸುತ್ತಿದ್ದಾರೆ. ಸುಳ್ಳು ಹೇಳುವ ಮೂಲಕ ಕೇಂದ್ರ ಸರಕಾರ ಹಿಂದಿನ ಸರಕಾರದ ಸಾಧನೆಗಳನ್ನು ತಮ್ಮವೆಂದು ಗೊಂದಲ ಸೃಷ್ಟಿಸುತ್ತಿರುವುದು ದುರಂತ ಸಂಗತಿ ಎಂದರು.

> **ಲೋಕಸಭಾ ಚುನಾವಣೆಗೆ ಜೆಡಿಎಸ್ 12 ಸೀಟು ಕೇಳಿದ್ದು, ಈ ಬಗ್ಗೆ ಪರಿಹಾರಾತ್ಮಕ ಚರ್ಚೆಯಾಗಿದೆ. ಮೈತ್ರಿ ಸರಕಾರದ ಕಾರ್ಯಗಳು ಚುನಾವಣೆಗೆ ಸಹಕಾರಿಯಾಗಲಿವೆ. ಜಂಟಿಯಾಗಿ ಪ್ರಚಾರಕ್ಕೆ ಇಳಿಯುತ್ತೇವೆ.**
> **- ಎಚ್.ಕೆ.ಪಾಟೀಲ್**
> ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ

ಕೇಂದ್ರ ಸರಕಾರ ಸಂಸತ್ತನ್ನು ಲಘುವಾಗಿ ಪರಿಗಣಿಸಿದ್ದು, ನ್ಯಾಯಾಂಗ ಹಸ್ತಕ್ಷೇಪ ಕುರಿತಂತೆ ಸುಪ್ರೀಂಕೋರ್ಟ್‌ನ ನಾಲ್ಕು ನ್ಯಾಯಾಧೀಶರು ಬಹಿರಂಗವಾಗಿ ಆತಂಕ ವ್ಯಕ್ತಪಡಿಸಿದ್ದರು. ಅಲ್ಲದೆ ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕ ಎಂದು ಎಚ್ಚರಿಸಿದ್ದರು.

### ಜಾಲತಾಣ ಸಮರ್ಥ ಬಳಕೆ

**ಮಾಧ್ಯಮಗಳಷ್ಟೇ ಸಾಮಾಜಿಕ ಜಾಲತಾಣಗಳು ಜನರ ಮೇಲೆ ಪ್ರಭಾವ ಬೀರುತ್ತದೆ. ಚುನಾವಣೆ ವೇಳೆ ಅವುಗಳನ್ನು ಸಮರ್ಥವಾಗಿ ಬಳಸಿಕೊಂಡು, ಹೊಸ ಆಲೋಚನೆ ಮತ್ತು ತಂತ್ರಗಾರಿಕೆ ಮೂಲಕ ರಾಜ್ಯದಲ್ಲಿ ಚುನಾವಣಾ ಪ್ರಚಾರಕ್ಕೆ ಇಳಿಯುತ್ತೇವೆ. ಬಿಜೆಪಿ ನೀತಿ ವಿರುದ್ಧ ಕಾಂಗ್ರೆಸ್ ಹೋರಾಟ ನಡೆಸಲಿದೆ ಎಂದು ತಿಳಿಸಿದರು.**

**ಅಸಮಾಧಾನವಿಲ್ಲ:** ಸಚಿವ ಸ್ಥಾನಗಳು 33 ಇದ್ದು, ಪ್ರಚಾರ ಸಮಿತಿ ಅಧ್ಯಕ್ಷ ಸ್ಥಾನ ಒಂದೇ ಇದೆ. ಆದ್ದರಿಂದ ನನಗೆ ಸಚಿವ ಸ್ಥಾನ ಸಿಕ್ಕಿಲ್ಲವೆಂಬ ಯಾವುದೇ ಅಸಮಾಧಾನವಿಲ್ಲ ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

ಭ್ರಷ್ಟಾಚಾರವನ್ನು ಕಾರ್ಪೊರೇಟ್ ವಿಧಾನದಲ್ಲಿ ನಡೆಸಿದ್ದಾರೆ. ಈ ಬಗ್ಗೆ ರಾಹುಲ್ ಗಾಂಧಿ ಅವರು ಪ್ರಶ್ನಿಸಿದ್ದಕ್ಕೆ ಉತ್ತರ ಕೊಡಲು ಪ್ರಧಾನಿ ಪಾರ್ಲಿಮೆಂಟಿಗೆ ಬರಲಿಲ್ಲ. ಸಿಬಿಐ ನಿರ್ದೇಶಕರನ್ನು ತಡರಾತ್ರಿ ಬದಲಾಯಿಸಿದರು. ಆ ಮೂಲಕ ಸಂವಿಧಾನಿಕ ಸಂಸ್ಥೆಗಳ ದುರುಪಯೋಗದ ಕಾರ್ಯ ಮಾಡಲಾಯಿತು. ಇದರಿಂದಾಗಿ ಸಿಬಿಐ ಮೇಲಿನ ಜನರ ವಿಶ್ವಾಸ ಮಣ್ಣುಪಾಲಾಯಿತು ಎಂದು ಬೇಸರ ವ್ಯಕ್ತಪಡಿಸಿದರು.

**ಸಣ್ಣ ಸಮಸ್ಯೆಗೆ ಪರಿಹಾರ :** ಅಸ್ತಿತ್ವ ಹೊಂದಿರುವ ಕಾಂಗ್ರೆಸ್ ಪಕ್ಷ ಲೋಕಸಭೆ ಚುನಾವಣೆಯ ಪ್ರಚಾರಕ್ಕೆ ವಿಚಾರಗಳಿವೆ. ಜೆಡಿಎಸ್ ಜತೆ ಮೈತ್ರಿ ಇದ್ದರೂ ಉತ್ತಮ ಸ್ನೇಹ ಇಟ್ಟುಕೊಂಡಿದೆ. ಮೈತ್ರಿ ಸರಕಾರದಲ್ಲಿ ಸಣ್ಣ ಸಮಸ್ಯೆ, ಬಿನ್ನಾಭಿಪ್ರಾಯ ಉಂಟಾದರೂ ಮುಖಂಡರ ನೇತೃತ್ವದಲ್ಲಿ ಬಗೆಹರಿಸಿಕೊಳ್ಳುತ್ತೇವೆ. ಆ ಮೂಲಕ ಸಮ್ಮಿಶ್ರ ಸರಕಾರ ಐದು ವರ್ಷ ಮುಂದುವರಿಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

## ಹಿಂದೂ ಮುಖಂಡರ ಹತ್ಯೆ ಸಂಚು ಗುಪ್ತಚರ ಇಲಾಖೆಗೆ ಮಾಹಿತಿ



**ಮಂಗಳೂರು:** ಕಲ್ಲಡ್ಕ ಪ್ರಭಾಕರ್ ಭಟ್ ಸೇರಿದಂತೆ ಹಿಂದೂ ಸಂಘಟನೆಗಳ ಮುಖಂಡರ ಹತ್ಯೆಗೆ ಸಂಚು ರೂಪಿ ಸಲಾಗುತ್ತಿದೆ ಎಂಬ ಮಾಹಿತಿ ಹೊರಬಿದ್ದಿದೆ. ಪೊಲೀಸ್ ಗುಪ್ತಚರ ಇಲಾಖೆಗೆ ಮಾಹಿತಿ ಲಭಿಸಿರುವ ಹಿನ್ನೆಲೆಯಲ್ಲಿ ಮುಖಂಡರಿಗೆ ಮೌಖಿಕ ಸೂಚನೆ ನೀಡಲಾಗಿದ್ದು, ಪೊಲೀಸ್ ಇಲಾಖೆ ವಿಶೇಷ ಭದ್ರತೆ ನೀಡಿದೆ. ಲೋಕಸಭಾ ಚುನಾವಣೆ ಸಮೀಪಿಸುತ್ತಿದ್ದು, ಧರ್ಮ ದ್ವೇಷದ ಮೂಲಕ ಮತ ಗಳಿಕೆಗೆ ಕಣ್ಣು ಹಾಕಿರುವ ಕೋಮು ವಿಚ್ಛಿದ್ರಕಾರಿ ಶಕ್ತಿಗಳು ಕೊಲೆ ಸಂಚು ರೂಪಿಸುವ ಸಾಧ್ಯತೆ ಇದೆ. ಹೀಗಾಗಿ ಹಿಂದೂ ಸಂಘಟನೆ ಮುಖಂಡರಿಗೆ ಅಲರ್ಟ್ ಆಗಿರಲು ಪೊಲೀಸ್ ಇಲಾಖೆಯಿಂದ ಸೂಚನೆ ಬಂದಿದೆ. ಕರಾವಳಿಯ ಪ್ರಮುಖ ನಾಯಕರಾದ ಶರಣ್ ಪಂಪ್ ವೆಲ್, ಜಗದೀಶ್ ಶೇಣವ ಹಾಗೂ ಕಲ್ಲಡ್ಕ ಪ್ರಭಾಕರ್ ಭಟ್ ಅವರಿಗೆ ಎಚ್ಚರಿಕೆ ವಹಿಸುವಂತೆ ಪೊಲೀಸರು ಸೂಚನೆ ನೀಡಿದ್ದಾರೆ. ಕಲ್ಲಡ್ಕದಲ್ಲಿ ಪ್ರಭಾಕರ ಭಟ್ ಅವರ ನಿವಾಸದ ಮೇಲೆ ದಾಳಿ ಮಾಡುವ ಸಾಧ್ಯತೆ ಹಿನ್ನೆಲೆಯಲ್ಲಿ ಸುರಕ್ಷಿತ ಸ್ಥಳದಲ್ಲಿ ಇರುವಂತೆ ಭಟ್ಟರಿಗೆ ಪೊಲೀಸ್ ಇಲಾಖೆಯಿಂದ ಸೂಚನೆ ಬಂದಿದೆ.

## ಕಾಂಗ್ರೆಸ್‌ನವರಿಗೆ ಅಧಿಕಾರ ಸಿಗದಂತೆ ರೇವಣ್ಣ ಕುತಂತ್ರ

**ಹಾಸನ:** ರೇವಣ್ಣ ಅವರು ಕಾಂಗ್ರೆಸ್‌ನವರಿಗೆ ಅಧಿಕಾರ ಸಿಗದಂತೆ ಇನ್ನಿಲ್ಲದ ಹುನ್ನಾರ ಮಾಡುತ್ತಿದ್ದಾರೆ ಎಂದು ಮಾಜಿ ಸಚಿವ ಎ. ಮಂಜು ಗಂಭೀರ ಆರೋಪ ಮಾಡಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಮ್ಮ ಪಕ್ಷ ಇಲ್ಲದೇ ಇದ್ರೆ, ಕುಮಾರಸ್ವಾಮಿ ಸಿಎಂ ಆಗುತ್ತಿದ್ದರೇ? ರೇವಣ್ಣ ಅವರು ಸಚಿವರಾಗುತ್ತಿದ್ದರೇ? ನಮ್ಮ ಶಾಸಕರಿಗೆ ಅಧಿಕಾರ ಕೊಡೋದು ನಮ್ಮ ಪಕ್ಷಕ್ಕೆ ಬಿಟ್ಟ ವಿಚಾರ ವಿಚಾರ, ಅದನ್ನು ಬಿಟ್ಟು ನಿಗಮ ಮಂಡಳಿ ನೇಮಕಕ್ಕೆ ತಡೆ ಒಡ್ಡೋಕೆ ಅಥವಾ ಬದಲಾವಣೆ ಮಾಡೋಕೆ ಇವರು ಯಾರು? ಅವರು 37 ಸ್ಥಾನ ಗೆದ್ದಿದ್ದಾರೆ. ಕುಮಾರಸ್ವಾಮಿ ಬದಲಿಗೆ ಬೇರೆಯವರನ್ನು ಸಿಎಂ ಮಾಡಿ ಎಂದ್ರೆ ಒಪ್ಪುತ್ತಾರಾ ಎಂದು ಕೇಳಿದರು. ಡಿಸಿಎಂ ಪರಮೇಶ್ವರ್ ಬಗ್ಗೆ ರೇವಣ್ಣ ನಯವಾದ ಮಾತುಗಳನ್ನು ಆಡುತ್ತಿದ್ದಾರೆ. ಆದರೆ ದಲಿತರಿಗೆ ಅಧಿಕಾರ ಸಿಗೋದು ಬೇಡ. ಚುನಾವಣೆ ಬಂದಾಗ ಮಾತ್ರ ದಲಿತರ ಜಪ ಮಾಡುತ್ತಾರೆ. ಅವರು ಮನೆಯಿಂದ ಹೊರ ಬರುವಾಗ ಅಕಸ್ಮಾತ್ ದಲಿತರು ಎದುರು ಬಂದರೆ, ಮತ್ತೆ ಮನೆ ಒಳಹೋಗಿ ಸ್ನಾನ ಮಾಡಿ, ದೇವರ ಪೂಜೆ ಮಾಡಿ ಬರುತ್ತಾರೆ. ದಲಿತ ಅಧಿಕಾರಿಗಳು ಆಯಕಟ್ಟಿನ ಸ್ಥಾನದಲ್ಲಿದ್ದರೆ ಎತ್ತಂಗಡಿ ಮಾಡುತ್ತಾರೆ ಎಂದರು.

## ದುಷ್ಕರ್ಮಿಗಳಿಂದ ಹಲ್ಲೆ

**ಹುಬ್ಬಳ್ಳಿ:** ಹಾಡಹಗಲೇ ಬೀದಿ ವ್ಯಾಪಾರಿಯ ಮೇಲೆ ನಾಲ್ವರು ದುಷ್ಕರ್ಮಿಗಳು ಹಲ್ಲೆ ನಡೆಸಿದ ಘಟನೆ ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಹಳೇ ಹುಬ್ಬಳ್ಳಿ ಗುಡಿಹಾಳ ರಸ್ತೆಯ ನಿಹಾಲ್ ಕಲ್ಯಾಣ ಮಂಟಪ ಬಳಿ ಹಲ್ಲೆ ನಡೆಸಲಾಗಿದೆ. ಹಳೇ ಹುಬ್ಬಳ್ಳಿಯ ನಿವಾಸಿ ಈರಣ್ಣ ಪವಾರ ಹಲ್ಲೆಗೆ ಒಳಗಾದ ವ್ಯಕ್ತಿ.

## ಕಾಯಿಲೆಗೆ ಜನ ಊರು ತೊರೆಯುತ್ತಿದ್ದಾರೆ !

← ಮೊದಲಪುಟದಿಂದ

ಯೂನಿಟ್ಟಿಗೆ ಬರೀ ಐದು ರೂಪಾಯಿ ಎಂದು ಲೆಕ್ಕ ಹಾಕಿದರೂ ಒಂದೂವರೆ ಲಕ್ಷ ಕೋಟಿ ರೂಪಾಯಿಗಳು. ಇಷ್ಟೆಲ್ಲ ಉತ್ಪತ್ತಿ ನೀಡುವ ಈ ಪ್ರದೇಶದ ಅಭಿವೃದ್ಧಿಗೆ ಯಾಕೆ ಇಷ್ಟು ನಿರ್ಲಕ್ಷ್ಯವೋ ಗೊತ್ತಿಲ್ಲ. ಭಾರತದ ಯಾವುದೇ ನದಿಯೂ ಇಲ್ಲಿಯವರೆಗೆ ಈ ಪ್ರಮಾಣದ ವಿದ್ಯುತ್ ಉತ್ಪಾದಿಸಿಲ್ಲವೆಂದು ಜಂಭ ಕೊಚ್ಚಿಕೊಳ್ಳುವ ಇಲಾಖೆ ಹಿನ್ನೀರಿನ ಹಳ್ಳಿಗಳಿಗೆ ಕೊಟ್ಟದ್ದು ಮಂಗನ ಕಾಯಿಲೆಯಂತಹ ಮರಣಾಂತಿಕ ರೋಗಗಳನ್ನು.

ಸರಕಾರ ಎಲ್ಲ ವ್ಯವಸ್ಥೆ ಮಾಡುತ್ತಿದ್ದೇವೆ ಎನ್ನುತ್ತಿದೆ. ಆದರೆ ಜನ ಸಾಯುತ್ತಲೇ ಇದ್ದಾರೆ. ಸತ್ತವರಿಗೆ ಒಂದಷ್ಟು ಪರಿಹಾರ ಘೋಷಿಸಲೂ ಸರಕಾರಕ್ಕೆ ಕರುಣೆಯಿಲ್ಲ. ಕೋಮು ಗಲಭೆಯಲ್ಲಿ ಸತ್ತವರಿಗೆ ಹತ್ತೆಂಟು ಲಕ್ಷ ಘೋಷಿಸುವ, ಬಯಲು ಸೀಮೆಯಲ್ಲೋ ನಗರಗಳಲ್ಲೋ ಯಾವುದೋ ಆಕಸ್ಮಿಕಗಳಲ್ಲಿ ಮಡಿದವರಿಗೆ ಐದಾರು ಲಕ್ಷ ಪರಿಹಾರ ನೀಡುವ ಸರಕಾರಕ್ಕೆ ಶರಾವತಿ ತೀರದ ಈ ನತದೃಷ್ಟರಿಗೆ ಪರಿಹಾರ ನೀಡಲು ಹಣವಿಲ್ಲ. ಕೇವಲ ಶರಾವತಿ ಯೋಜನೆಯೊಂದರಿಂದಲೇ ಕನಿಷ್ಟ ವರ್ಷಕ್ಕೆ ಐದು ಸಾವಿರ ಮಿಲಿಯನ್ ಉತ್ಪಾದನೆ ಆಗುತ್ತಿದೆ. ಯೂನಿಟ್ಟಿಗೆ ಐದು ರುಪಾಯಿ ಲೆಕ್ಕಹಾಕಿದರೂ ಕನಿಷ್ಟು ಎರಡೂವರೆ ಸಾವಿರ ಕೋಟಿ ರೂಪಾಯಿ ನೇರ ಉತ್ಪತ್ತಿ. ಅಷ್ಟಿದ್ದೂ ಹಿನ್ನೀರಿನ ಮಂದಿಯ ಸಂಕಷ್ಟಕ್ಕೆ ನೀಡುತ್ತಿರುವ ನೆರವು ಶೂನ್ಯ.

ಊರಿನ ಋಣದಲ್ಲಿ ಬೆಳೆದ ನನ್ನಂತವರಿಗೆ ಊರಿಗೇನೂ ಮಾಡಲಾಗದ ಸಂಕಟ. ಕೊನೇ ಪಕ್ಷ ಜತೆಯಲ್ಲಿ ನಾವಿದ್ದೇವೆ ಎಂಬ ನೆಮ್ಮದಿಯಾದರೂ ಇರಲೆಂದು ಮತ್ತೆ ಮತ್ತೆ ಊರಿಗೆ ಹೋಗಿ ಬರುವುದನ್ನು ಬಿಟ್ಟರೆ ನಾವೂ ಮಾತಿನ ವೀರರೇ. ಮನಸ್ಸೆಲ್ಲ ಮುದುಡಿ ಹೋದ ಅಸಹಾಯಕತೆ, ಅನಾಥ ಪ್ರಜ್ಞೆ. ನಿನ್ನೆ ರೈಲಿನಲ್ಲಿ ಬರುವಾಗಲೇ ತಮಗಿದನ್ನು ತಿಳಿಸಬೇಕೆಂದು ಯೋಚಿಸಿದ್ದೆ, ಮನುಷ್ಯರಿಗೆ ಮುಪ್ಪು ಬಂದರೆ ಹೇಗೋ ಸಹಿಸಿಕೊಳ್ಳಬಹುದು, ಆದರೆ ಊರಿಗೇ ಮುಪ್ಪು ಬಂದರೆ, ಬಹಳ ಸಂಕಟವಾಗುತ್ತದೆ. ಮಾಧ್ಯಮ ಕ್ಷೇತ್ರದ ಮುಂಚೂಣಿಯಲ್ಲಿರುವ ತಮ್ಮಂತವರಿಗೆ ಸತ್ಯ ಘಟನೆ ತಿಳಿದರೆ ಏನಾದರೂ ಸಹಾಯವಾದೀತು ಎಂಬ ನಿರೀಕ್ಷೆಯಲ್ಲಿ ಬರೆದಿದ್ದೇನೆ ಅಷ್ಟೆ.

## ಬಡವರಿಗೆ ಶೇ.10ರಷ್ಟು ಮೀಸಲು ಸ್ವಾಗತಾರ್ಹ



**ಬೆಂಗಳೂರು:** ಕೇಂದ್ರ ಸರಕಾರವು ಆರ್ಥಿಕವಾಗಿ ಹಿಂದುಳಿದಿರುವ ಸಾಮಾನ್ಯ ವರ್ಗಗಳ ಬಡವರಿಗೆ ಶೇ.10 ರಷ್ಟು ಮೀಸಲು ಜಾರಿಗೊಳಿಸಲು ತೀರ್ಮಾನಿಸಿರುವುದು ಒಳ್ಳೆಯ ವಿಷಯ ಎಂದು ಕಂದಾಯ ಸಚಿವ ಆರ್.ವಿ.ದೇಶಪಾಂಡೆ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ಉದ್ದೇಶಿತ ಮೀಸಲನ್ನು ಜಾರಿಗೆ ತರಲು ತಿದ್ದುಪಡಿ ಮಸೂದೆ ಮಂಡಿಸಿ, ಸಂಸತ್ತಿನ ಉಭಯ ಸದನಗಳ ಅನುಮೋದನೆ ಪಡೆದಿರುವುದು ಸ್ವಾಗತಾರ್ಹ. ಇದರಿಂದಾಗಿ ಆರ್ಥಿಕವಾಗಿ ಹಿಂದುಳಿದವರಿಗೆ ನೀಡುವ ಯಾವುದೇ ಬಗೆಯ ಮೀಸಲು ಸೌಲಭ್ಯಕ್ಕೆ ಒಳಪಡದಿರುವಂತಹ ವರ್ಗಗಳ ಬಡವರಿಗೆ ಅನುಕೂಲವಾಗಲಿದೆ ಎಂದರು.

### ಕೆಳದರ್ಜೆ ನೌಕರರ ಮಾಸಿಕ ಅನುಕಂಪ ಭತ್ಯೆ ಹೆಚ್ಚಳ

**ರಾಜ್ಯದ ಕೆಳದರ್ಜೆ ನೌಕರರಾದ ತೋಟಿ, ತಳವಾರ, ನೀರಗಂಟಿ, ವಾಲೀಕಾರ, ಸನದಿ ಮತ್ತಿತರರಿಗೆ ಸದ್ಯ ನೀಡಲಾಗುತ್ತಿರುವ ಮಾಸಿಕ 800 ರು.ಗಳ ಅನುಕಂಪ ಭತ್ಯೆಯನ್ನು 1,600 ರು.ಗಳಿಗೆ ಹೆಚ್ಚಿಸಲಾಗಿದೆ ಎಂದು ಕಂದಾಯ ಸಚಿವ ಆರ್.ವಿ.ದೇಶಪಾಂಡೆ ತಿಳಿಸಿದ್ದಾರೆ. ರಾಜ್ಯದ ಒಟ್ಟು ನಾಲ್ಕು ಕಂದಾಯ ವಿಭಾಗಗಳಲ್ಲಿ ಒಟ್ಟು 2,869 ಕೆಳದರ್ಜೆ ನೌಕರರಿದ್ದಾರೆ. ಈ ಪೈಕಿ ಬೆಂಗಳೂರು ಕಂದಾಯ ವಿಭಾಗದಲ್ಲಿ 1,925, ಮೈಸೂರು ವಿಭಾಗದಲ್ಲಿ 56, ಬೆಳಗಾವಿ 281 ಮತ್ತು ಕಲಬುರಗಿ ವಿಭಾಗದಲ್ಲಿ 607 ಮಂದಿ ಇದ್ದಾರೆ. ಇವರೆಲ್ಲರಿಗೂ ಈ ಹೆಚ್ಚಳದ ಲಾಭ ಸಿಗ ಲಿದ್ದು, ಈ ಸಂಬಂಧ ಆದೇಶ ಹೊರಡಿಸಲಾಗಿದೆ ಎಂದು ತಿಳಿಸಿದ್ದಾರೆ.**

## ಕಪ್ಪತ ಗುಡ್ಡ, ಬುಕ್ಕಾಪಟ್ಟಣ ಮೀಸಲು ಅರಣ್ಯ ಪ್ರದೇಶ



**ಬೆಂಗಳೂರು:** ಗದಗ ಜಿಲ್ಲೆಯ ಕಪ್ಪತಗುಡ್ಡ ಅರಣ್ಯ, ತುಮಕೂರು ಜಿಲ್ಲೆಯ ಬುಕ್ಕಾಪಟ್ಟಣ ಮೀಸಲು ಅರಣ್ಯ ಮತ್ತು ಅದಕ್ಕೆ ಹೊಂದಿಕೊಂಡಿರುವ ಸುಮಾರು 40 ಸಾವಿರ ಎಕರೆಯನ್ನು ಮೀಸಲು ಅರಣ್ಯ ಪ್ರದೇಶವೆಂದು ಘೋಷಿಸಲಾಗಿದೆ ಎಂದು ಅರಣ್ಯ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು.

ವಿಧಾನಸೌಧದಲ್ಲಿ ಏರ್ಪಡಿಸಿದ್ದ ಇಲಾಖೆಯ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಕಾವೇರಿ ಮತ್ತು ಮಲೆಮಹದೇಶ್ವರ ವನ್ಯಜೀವಿ ಧಾಮಗಳನ್ನು ಹುಲಿ ಸಂರಕ್ಷಿತ ಪ್ರದೇಶವೆಂದು ಘೋಷಿಸಲಾಗಿದೆ. ಕೋಲಾರದ ಕಾಮುಸಮುದ್ರ ಮೀಸಲು ಅರಣ್ಯ ಭೂಮಿಯನ್ನು ವನ್ಯಜೀವಿಧಾಮವೆಂದು ಘೋಷಣೆ ಮಾಡಲಾಗಿದೆ ಎಂದು ಹೇಳಿದರು.

## ಮಂಡ್ಯದಿಂದ ನಿಖಿಲ್ ಕಣಕ್ಕಿಳಿಸಲು ಆಗ್ರಹ

**ಮಂಡ್ಯ:** ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದಿಂದ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಪುತ್ರ ನಿಖಿಲ್ ಕುಮಾರಸ್ವಾಮಿ ಅವರನ್ನು ಕಣಕ್ಕಿಳಿ ಸುವಂತೆ ಜೆಡಿಎಸ್ ಮುಖಂಡರು ಒತ್ತಡ ಹೇರಿದ್ದಾರೆ.



ಜೆಡಿಎಸ್ ಜಿಲ್ಲಾಧ್ಯಕ್ಷೆ ನಾಗರತ್ನ ಸ್ವಾಮಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿ, ಮಂಡ್ಯ ಲೋಕಸಭಾ ಕ್ಷೇತ್ರ ವ್ಯಾಪ್ತಿಯ 8 ವಿಧಾ ನಸಭಾ ಕ್ಷೇತ್ರಗಳಲ್ಲೂ ಜೆಡಿಎಸ್ ಶಾಸಕರಿದ್ದಾರೆ. ಇಲ್ಲಿಗೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ಕೊಡುಗೆ ಅಪಾರವಾಗಿದ್ದು, ಅವರ ಕುಟುಂಬಕ್ಕೆ ನೇರವಾಗಿ ಮತ ನೀಡುವ ಅವಕಾಶ ಒದಗಿ ಬರುವುದನ್ನು ಜಿಲ್ಲೆಯ ಮತ ದಾರರು ಎದುರು ನೋಡುತ್ತಿದ್ದಾರೆ. ನಿಖಿಲ್ ಕುಮಾರಸ್ವಾಮಿ ಅವರು ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಕಳೆದ ಏಳೆಂಟು ವರ್ಷಗಳಿದ ಒಡನಾಟವಿರಿಸಿಕೊಂಡಿದ್ದು, ಈ ಕ್ಷೇತ್ರದಲ್ಲಿ ಚಿರಪರಿಚಿತರಾಗಿದ್ದಾರೆ. ಆದ್ದರಿಂದ ಮುಂಬ ರುವ ಲೋಕಸಭಾ ಚುನಾವಣೆಗೆ ಅವರೇ ಸೂಕ್ತ ಅಭ್ಯರ್ಥಿ ಎನ್ನುವುದನ್ನು ವರಿಷ್ಠರಿಗೆ ಮನವರಿಕೆ ಮಾಡಿಕೊಡಲಾಗಿದೆ ಎಂದು ತಿಳಿಸಿದರು.

ಕರ್ನಾಟಕ ಸರ್ಕಾರ
**ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, ಶಿರಸಿ ವಿಭಾಗ, ಶಿರಸಿ**
ಕ್ರಸಂ: ಟೆಂಡರ್/ಅಧಿಸೂಚನೆ: ಖೇಲೋ ಇಂಡಿಯಾ/:2018-19/3238 ದಿನಾಂಕ: 08.01.2019
**ಇ-ಟೆಂಡರ್ ಅಧಿಸೂಚನೆ IFT-KW-4**
**ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ದ್ವಿ ಲಕೋಟೆ ಪದ್ಧತಿಯಲ್ಲಿ)**
ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ನೋಂದಾಯಿತ ಒಂದನೇ ದರ್ಜೆ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ ಇ-ಪ್ರೋಕ್ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಕಾಣಿಸಿದಂತೆ ಇ-ಪ್ರೋಕ್‌ನಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **www.eproc.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ.
(1) ಟೆಂಡರ್ ಮಾಹಿತಿ ವಿಚಾರಣೆಗೆ ಕೊನೆಯ **ದಿನಾಂಕ: 11.03.2019 (16.00 ಗಂಟೆಗೆ)**
(2) ಟೆಂಡರ್ ಸ್ವೀಕರಿಸಲು ಕೊನೆಯ **ದಿನಾಂಕ: 12.03.2019 (16.00 ಗಂಟೆವರೆಗೆ).**
(3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 13.03.2019 (16.30 ಗಂಟೆವರೆಗೆ).**
(4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 15.03.2019 (16.00 ಗಂಟೆವರೆಗೆ).**
ಕಾಮಗಾರಿಯ ಹೆಸರು: **(1) ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲೂಕಿನ ಹಳಿಯಾಳದಲ್ಲಿ ಬಹುಪಯೋಗಿ ಒಳಾಂಗಣ ಹಾಲ್ ನಿರ್ಮಾಣ ಮಾಡುವ ಕುರಿತು.** ಅಂದಾಜು ಮೊತ್ತ: ರೂ.750.00 ಲಕ್ಷ, ಟೆಂಡರಿಗಿಟ್ಟ ಮೊತ್ತ: ರೂ. 745.00 ಲಕ್ಷ, ಮುಂಗಡ ಠೇವಣಿ: ರೂ. 11,25,000/-, ಕಾಮಗಾರಿ ಟೆಂಡರ್ ನಿರ್ವಹಣೆ ಶುಲ್ಕ (ರೂ.ಗಳಲ್ಲಿ): www.eproc.karnataka.gov.in ವೆಬ್‌ಸೈಟ್ ನೋಡಿ, ಕಾಮಗಾರಿ ಪೂರ್ಣಗೊಳಿಸಲು ಅವಧಿ: 24 ತಿಂಗಳು.
ಸಹಿ/- (ಆರ್.ಎಚ್. ಕುಲಕರ್ಣಿ)
ಕಾರ್ಯನಿರ್ವಾಹಕ ಇಂಜಿನೀಯರರು ಹಾಗೂ ರಾಜ್ಯ ಹೆದ್ದಾರಿ ಪ್ರಾಧಿಕಾರ ಅಧಿಕಾರಿ
ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ,
ವಿಭಾಗ ಶಿರಸಿ (ಉತ್ತರ ಕನ್ನಡ ಜಿಲ್ಲೆ)
DIPR/KWR/MCA/521/18-19 Dt.10.1.19

# ಐವಿಎಫ್ (IVF) ಪ್ರಕ್ರಿಯೆ ಹೇಗೆ?

**ಡಾ. ಬಿ.ರಮೇಶ್**



**ಏನಿದು ಐವಿಎಫ್?**

ಐವಿಎಫ್ (IVF - In Vitro Fertilisation) ವಿಧಾನದಲ್ಲಿ ಭ್ರೂಣವನ್ನು ಪ್ರಯೋಗಾಲಯದಲ್ಲಿ ಸೃಷ್ಟಿಸಿ ತಾಯಿಯ ಗರ್ಭಕ್ಕೆ ಸೇರಿಸಲಾಗುತ್ತದೆ. ಇದನ್ನು ವೈದ್ಯಭಾಷೆಯಲ್ಲಿ 'ಟೆಸ್ಟ್ ಟ್ಯೂಬ್ ಬೇಬಿ' ಎಂದೂ ಹೇಳಲಾಗುತ್ತದೆ. ಮಹಿಳೆಯ ಅಂಡಾಣು ಹಾಗೂ ಪುರುಷನ ವೀರ್ಯಾಣು ಪಡೆದು ಎರಡನ್ನೂ ಪ್ರಯೋಗಾಲಯದಲ್ಲಿ ಫಲೀಕರಿಸಿ ಬಳಿಕ ತಾಯಿಯ ಗರ್ಭಕ್ಕೆ ಸೇರಿಸಲಾಗುತ್ತದೆ.

**ಐವಿಎಫ್‌ನ ಕಾರ್ಯ ಹೇಗೆ?**

**ಮಹಿಳೆಯರಿಗೆ**

**ಹಂತ 1:** ನೈಸರ್ಗಿಕ ಹಾರ್ಮೋನು ಮಾಸಿಕ ಋತುಚಕ್ರ ಸ್ಥಗಿತಗೊಳಿಸುವಿಕೆ

ನೈಸರ್ಗಿಕ ಋತುಚಕ್ರ ಸ್ಥಗಿತಗೊಳಿಸಲು ಎರಡು ವಾರಗಳ ಕಾಲ ಪ್ರತಿದಿನ ಒಂದೊಂದು ಚುಚ್ಚುಮದ್ದು ಹಾಕಲಾಗುತ್ತದೆ.

**ಹಂತ 2: ಅಂಡಾಣು ಬಿಡುಗಡೆಗೆ ಉತ್ತೇಜನ**

ನೈಸರ್ಗಿಕ ಋತುಚಕ್ರ ನಿಲ್ಲಿಸಿದ ಬಳಿಕ ಅಂಡಗಳ ಬಿಡುಗಡೆಗೆ (ಎಫ್‌ಎ) ಎಂಬ ಫರ್ಟಿಲಿಟಿ ಹಾರ್ಮೋನು ಕೊಡಲಾಗುತ್ತದೆ. ಅದಕ್ಕಾಗಿ 12 ದಿನಗಳು ಒಂದೊಂದು ಚುಚ್ಚುಮದ್ದು ಹಾಕಲಾಗುತ್ತದೆ. ಅಂಡಾಣುಗಳ ಹೆಚ್ಚಳಕ್ಕೆ ಈ ಹಾರ್ಮೋನು ನೆರವಾಗುತ್ತದೆ.

**ಹಂತ 3:** ಅಂಡಾಣುಗಳ ಬೆಳವಣಿಗೆಯ ಪರಿಶೀಲನೆ: ಅಂಡಾಣುಗಳು ಹೇಗೆ ಬೆಳೆಯುತ್ತವೆ ಎನ್ನುವುದನ್ನು ವೆಜೈನಲ್ ಅಲ್ಟ್ರಾಸೌಂಡ್ ಮೂಲಕ ಕಂಡುಕೊಳ್ಳಲಾಗುತ್ತದೆ.

**ಹಂತ 4: ಅಂಡಾಣುಗಳ ಸಂಗ್ರಹ**

ಮಹಿಳೆ ಪ್ರಜ್ಞಾಹೀನ ಸ್ಥಿತಿಯಲ್ಲಿ ಇರುವಾಗ ಅಲ್ಟ್ರಾಸೌಂಡ್‌ನ ನಿರ್ದೇಶನದ ಪ್ರಕಾರ ಅಂಡಾ ಣು ಸಂಗ್ರಹ ಪ್ರಕ್ರಿಯೆ ನಡೆಸಲಾಗುತ್ತದೆ. ಸೂಜಿ ಯ ಸಹಾಯದಿಂದ ಆಕೆಯ ಅಂಡ ಕೋಶದಲ್ಲಿನ ಎಲ್ಲ ಅಂಡಾಣುಗಳನ್ನು ಸಂಗ್ರಹಿ ಸಲಾಗುತ್ತದೆ. ಈ ಪ್ರಕ್ರಿಯೆ ಬಳಿಕ ಮಹಿಳೆಗೆ ಸ್ವಲ್ಪ ಹೊತ್ತು ಹೊಟ್ಟೆ ನೋವು ಇಲ್ಲವೆ ಅತ್ಯಲ್ಪ ಪ್ರಮಾಣ ದಲ್ಲಿ ರಕ್ತಸ್ರಾವ ಉಂಟಾಗಬ ಹುದು.

**ಹಂತ 5: ಅಂಡಾಣುಗಳ ಫಲೀಕರಣ**

ಸಂಗಾತಿಯ ವೀರ್ಯಾಣು ಪಡೆದು ಅಂಡಾಣುವಿನ ಜತೆಗೆ ಮಿಲನಗೊಳಿಸಿ ಪ್ರಯೋಗಾಲಯದಲ್ಲಿ 16-20 ಗಂಟೆಗಳು ಇಡಲಾಗುತ್ತದೆ. ಬಳಿಕ ಭ್ರೂಣದ ಬೆಳವಣಿಗೆಯ ಬಗ್ಗೆ ಸತತ ಪರಿಶೀಲನೆ ನಡೆಸಲಾಗುತ್ತದೆ. ಅವುಗಳಲ್ಲಿ ಅತ್ಯುತ್ತಮವೆಂದು ಕಂಡುಬಂದ ಭ್ರೂಣವನ್ನು ಗರ್ಭಕೋಶಕ್ಕೆ ಸೇರಿಸಲಾಗುತ್ತದೆ.

**ಹಂತ 6: ಭ್ರೂಣದ ವರ್ಗಾವಣೆ**

ಮಹಿಳೆಯ ವಯಸ್ಸು 40ರೊಳಗೆ ಇದ್ದರೆ ಫಲೀಕರಣಗೊಂಡ 2 ಭ್ರೂಣಗಳನ್ನು ಸೇರಿಸಲಾಗುತ್ತದೆ. ಒಂದು ವೇಳೆ ಮಹಿಳೆಯ ವಯಸ್ಸು 40 ಮೀರಿದ್ದರೆ ಏಕಕಾಲಕ್ಕೆ 3 ಭ್ರೂಣಗಳನ್ನು ಸೇರಿಸಲಾಗುತ್ತದೆ. ಇನ್ನುಳಿದ ಉತ್ತಮ ಗುಣಮಟ್ಟದ ಭ್ರೂಣಗಳನ್ನು ಹಾಗೆಯೇ ಫ್ರೀಜ್ ಮಾಡಲಾಗುತ್ತದೆ. ಮತ್ತೊಮ್ಮೆ ಐವಿಎಫ್ ಮಾಡಬೇಕಾಗಿ ಬಂದಾಗ ಈ ಭ್ರೂಣಗಳನ್ನು ಬಳಸಿಕೊಳ್ಳಬಹುದಾಗಿದೆ.

**ಹಂತ 7:** 5-6 ದಿನಗಳು ಭ್ರೂಣವನ್ನು ಚೆನ್ನಾಗಿ ಪಕ್ವಗೊಳಿಸಲು ಬಿಟ್ಟು ಬಳಿಕ ಭ್ರೂಣವನ್ನು ಗರ್ಭ ಕೋಶಕ್ಕೆ ಸೇರಿಸಲಾಗುತ್ತದೆ. ಇದಕ್ಕೆ Cpdw¦s Uwbqihw (CU) ಎಂದು ಕರೆಯುತ್ತಾರೆ.

**ಇಕ್ಸಿ ವಿಧಾನ (ICSI - INTRA CYTOPLASMIC SPERM INJECTION)**

ಏನಿದು ಇಂಟ್ರಾ ಸೈಟೊಪ್ಲಾಸ್ಮಿಕ್ ಸ್ಪರ್ಮ್ ಇಂಜೆಕ್ಷನ್? ಇದು ಹೇಗೆ ಕಾರ್ಯ ನಿರ್ವಹಿ ಸುತ್ತದೆ?

ಇಂಟ್ರಾ ಸೈಟೊಪ್ಲಾಸ್ಮಿಕ್ ಸ್ಪರ್ಮ್ ಇಂಜೆಕ್ಷನ್ (ICSI) ವಿಧಾನದಲ್ಲಿ ಅಂಡಾಣುವಿಗೆ ನೇರವಾಗಿ ವೀರ್ಯಾಣುವನ್ನು ಸೇರಿಸಿ ಭ್ರೂಣವನ್ನು ಸೃಷ್ಟಿಸಲಾಗುತ್ತದೆ. ಆಬಳಿಕ ಆ ಭ್ರೂಣವನ್ನು ಮಹಿಳೆಯ ಗರ್ಭಕೋಶಕ್ಕೆ ಸೇರಿಸಲಾಗುತ್ತದೆ.

**ಯಾವ ಸಂದರ್ಭದಲ್ಲಿ ಇಕ್ಸಿ ಸೂಕ್ತ?**

- ಗಂಡನಲ್ಲಿ ವೀರ್ಯಾಣು ಸಂಖ್ಯೆ ತೀರಾ ಕಡಿಮೆ ಇದ್ದಾಗ ಇಕ್ಸಿ ಪ್ರಕ್ರಿಯೆಗೆ ಒಳಗಾಗುವುದು ಒಳ್ಳೆಯದು.
- ವೀರ್ಯಾಣುವಿನಲ್ಲಿ ಬೇರೆ ಸಮಸ್ಯೆಗಳು ಅಂದರೆ ಅದರ ಆಕಾರ ಸರಿ ಇರದಿದ್ದರೆ, ಅದರಲ್ಲಿ ಚಲನೆ ಇಲ್ಲದೆ ಇದ್ದರೆ ಇಕ್ಸಿ ಸೂಕ್ತ.
- ಈಗಾಗಲೇ ಒಂದು ಬಾರಿ ಐವಿಎಫ್ ಪ್ರಕ್ರಿಯೆ ವಿಫಲವಾದವರಲ್ಲಿ 'ಇಕ್ಸಿ' ಉಪಯುಕ್ತ ಎನಿಸಬಹುದು.
- ಗಂಡ ಈ ಮುಂಚೆಯೇ ವ್ಯಾಸೆಕ್ಟಮಿ ಮಾಡಿಸಿಕೊಂಡಿದ್ದರೆ ವೀರ್ಯಾಣು ಸಿಗದೇ ಇರುವ ಸಮಸ್ಯೆ ಉಂಟಾಗಬಹುದು. ಅಂತಹ ಸಂದರ್ಭದಲ್ಲಿ ಇಕ್ಸಿ ವಿಧಾನ ಅನುಸರಿಸುವುದು ಪ್ರಯೋಜನಕಾರಿ ಅನಿಸಬಹುದು. ಗಂಡನ ಅಂಡಕೋಶದಿಂದಲೇ ನೇರವಾಗಿ ವೀರ್ಯಾಣು ಪಡೆದು ಅದನ್ನು ಅಂಡಾಣುವಿನಲ್ಲಿ ಇಂಜೆಕ್ಟ್ ಮಾಡುತ್ತಾರೆ.

**ಇಕ್ಸಿ ಹೇಗೆ ಕಾರ್ಯನಿರ್ವಹಿಸುತ್ತದೆ?**

ಭ್ರೂಣ ತಜ್ಞರು ಎಲ್ಲಕ್ಕೂ ಮುಂಚೆ ಅತ್ಯುತ್ತಮವಾದ ಅಂಡಾಣುವನ್ನು ಆಯ್ಕೆ ಮಾಡುತ್ತಾರೆ. ಬಳಿಕ ಗುಣಮಟ್ಟದ ವೀರ್ಯಾಣುವನ್ನು ಸಂಗ್ರಹಿಸಿ ಅದನ್ನು ನೇರವಾಗಿಯೇ ಅಂಡಾಣುವಿನೊಳಗೆ ಇಂಜೆಕ್ಷನ್ ಮೂಲಕ ಸೇರಿಸುತ್ತಾರೆ. ಭ್ರೂಣ ಸೃಷ್ಟಿ ಪ್ರಕ್ರಿಯೆ ಮುಗಿದ ಬಳಿಕ ಅದನ್ನು ತಾಯಿಯ ಗರ್ಭದಲ್ಲಿ ಸೇರಿಸುತ್ತಾರೆ. ವೀರ್ಯಾಣುಗಳ ಸಂಖ್ಯೆ ಎಷ್ಟೇ ಕಡಿಮೆಯಿದ್ದರೂ ಇಕ್ಸಿ ವಿಧಾನದಲ್ಲಿ ಯಶಸ್ಸು ಪಡೆಯಬಹುದಾಗಿದೆ.

**ಮಾಹಿತಿಗಾಗಿ**
**ಆಲ್ಟಿಯಸ್ ಹಾಸ್ಪಿಟಲ್**
**#915, 1ನೇ ಮಹಡಿ, ಧನುಷ್ ಪ್ಲಾಜಾ,**
**ಐಡಿಯಲ್ ಹೋಮ್ಸ್ ಟೌನ್‌ಶಿಪ್,**
**ಗೋಪಾಲನ್ ಮಾಲ್ ಸಮೀಪ,**
**ರಾಜರಾಜೇಶ್ವರಿನಗರ, ಬೆಂಗಳೂರು.**
**ಫೋನ್ ನಂ: 9663311128**

**ಐವಿಎಫ್ ನನಗೆ ಸೂಕ್ತವೆ?**

**ಕೆಳಕಂಡ ಸಂದರ್ಭದಲ್ಲಿ ಐವಿಎಫ್'ಗೆ ಶಿಫಾರಸು ಮಾಡಲಾಗುತ್ತದೆ**

- **ಎರಡೂ ಗರ್ಭನಾಳಗಳು ಬ್ಲಾಕ್ ಆಗಿದ್ದರೆ**
- **ಬೇರೆ ಕೆಲವು ವಿಧಾನ ಅನುಸರಿಸಿದರೂ (ಉದಾಹರಣೆಗೆ ಐಯುಐ -IUI ವಿಧಾನ) ಮಕ್ಕಳು ಆಗದೇ ಇದ್ದರೆ**
- **ಗಂಡನಲ್ಲಿ ವೀರ್ಯಾಣುವಿನ ಯಾವುದಾದರೂ ಗಂಭೀರ ಸಮಸ್ಯೆ ಇದ್ದರೆ.**
- **ದಂಪತಿ ಯಾವುದೇ ಕಾರಣವಿಲ್ಲದೆ ಬಂಜೆತನದ ಸಮಸ್ಯೆ ಎದುರಿಸುತ್ತಿದ್ದರೆ.**



**ಕಾರ್ಯಪಾಲಕ ಅಭಿಯಂತರರ ಕಛೇರಿ**
**ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ**
ಸಂಖ್ಯೆ: ಕಾಅ:ಪಂರಾಇಂವಿ:ಮಂಡ್ಯ:ಟೆಂಪ್ರ:ಕಿಇಂ-1:2018-19 ದಿನಾಂಕ: 07-01-2019
**ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 24 / 2018-19**
ಕರ್ನಾಟಕ ಸರ್ಕಾರದ ರಾಜ್ಯಪಾಲರುರವರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯರವರಿಂದ, ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ/ಜಿ.ಪಂ.ಅಭಿವೃದ್ಧಿ/ಶಿಕ್ಷಣ ಇಲಾಖೆ ಅನುದಾನ ಲೆಕ್ಕ ಶೀರ್ಷಿಕೆಗಳಡಿ ಅನುಮೋದನೆಯಾಗಿರುವ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್‌ರೋಲ್ ಮಾಡಿಸಿರುವ **ಅರ್ಹ ಗುತ್ತಿಗೆದಾರರುಗಳಿಂದ** ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ. | ಕಾಮಗಾರಿಯ ಹೆಸರು | ಟೆಂಡರಿಗಿಡಲಾದ ಮೊತ್ತ (ರೂ. ಲಕ್ಷಗಳಲ್ಲಿ) | ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ) | ಗುತ್ತಿಗೆದಾರರ ವರ್ಗ (ಪ.ಜಾ/ಪ.ಪಂ/ ಸಾಮಾನ್ಯ & ಇತರೆ) | ಕಾಲಮಿತಿ (ಮಳೆಗಾಲ ಸೇರಿ) |
|---|---|---|---|---|---|
| 1 | 2 | 3 | 4 | 5 | |
| 1 | ಮಳವಳ್ಳಿ ತಾ: ಹುಲ್ಲಹಳ್ಳಿ ಗ್ರಾಮದಿಂದ ಹುಸ್ಕೂರಿಗೆ ಹೋಗುವ ರಸ್ತೆ ಅಭಿವೃದ್ಧಿ | 45.00 | 45000.00 | ಎಸ್.ಸಿ. | 3 ತಿಂಗಳು |
| 2 | ಮಳವಳ್ಳಿ ತಾ: ದೇವಿಪುರ ಗ್ರಾಮದಿಂದ ಜೆ.ಸಿ.ಪುರ ಮಾರ್ಗವಾಗಿ ಕಾಡುಕೊತ್ತನ ಹಳ್ಳಿಗೆ ಸೇರುವ ರಸ್ತೆ ಅಭಿವೃದ್ಧಿ | 45.00 | 90000.00 | ಇತರೆ | 3 ತಿಂಗಳು |
| 3 | ಮಳವಳ್ಳಿ ತಾ: ಕುಂದೂರಿನಿಂದ ಕಲ್ಯಾಣಿ ಕೊಪ್ಪಲು ಗ್ರಾಮಕ್ಕೆ ಸೇರುವ ರಸ್ತೆ ಅಭಿವೃದ್ಧಿ | 45.00 | 90000.00 | ಇತರೆ | 3 ತಿಂಗಳು |
| 4 | ಮಂಡ್ಯ ನಗರದ ಹೊಸನಗರ ಸರ್ಕಾರಿ ಹಿ.ಪ್ರಾ.ಶಾಲೆ ಕಟ್ಟಡ ದುರಸ್ಥಿ | 3.00 | 7500.00 | ಇತರೆ | 1 ತಿಂಗಳು |
| 5 | ಮಂಡ್ಯ ನಗರದ ಹಾಲಹಳ್ಳಿ ಬಡಾವಣೆಯ ಸರ್ಕಾರಿ ಹಿ.ಪ್ರಾ.ಶಾಲೆ ಕಟ್ಟಡ ದುರಸ್ಥಿ | 3.00 | 3750.00 | ಎಸ್.ಸಿ. | 1 ತಿಂಗಳು |
| 6. | ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ಉಪ ವಿಭಾಗ, ಶ್ರೀರಂಗಪಟ್ಟಣ ಕಛೇರಿಯ ಆವರಣದಲ್ಲಿ ಪುರಷರ ಹಾಗೂ ಮಹಿಳೆಯರ ಶೌಚಾಲಯ ನಿರ್ಮಾಣ | 4.99 | 6238.00 | ಎಸ್.ಟಿ. | 2 ತಿಂಗಳು |

*** ಗುತ್ತಿಗೆದಾರರ ದರ್ಜೆ: ರೂ. 10.00 ಲಕ್ಷದವರೆಗಿನ ಮೊತ್ತದ ಕಾಮಗಾರಿಗಳಿಗೆ: 3ನೇ ದರ್ಜೆ & ಮೇಲ್ಪಟ್ಟು ರೂ.25.00 ಲಕ್ಷಕ್ಕಿಂತ ಮೇಲ್ಪಟ್ಟ ಮೊತ್ತದ ಕಾಮಗಾರಿಗಳಿಗೆ: 1ನೇ ದರ್ಜೆ ಗುತ್ತಿಗೆದಾರರು.**
ಟೆಂಡರ್‌ಗಳನ್ನು e-procurement portal, https://eproc.karnataka.gov.in Online ಮುಖಾಂತರ ಸಲ್ಲಿಸತಕ್ಕದ್ದು. ಟೆಂಡರ್‌ಗಳನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ: 28-01-2019 ಸಂಜೆ 4.00 ಗಂಟೆವರೆಗೆ, ಟೆಂಡರ್‌ಗಳನ್ನು ತೆರೆಯುವುದು ದಿನಾಂಕ: 30-01-2019 ಬೆಳಿಗ್ಗೆ 11.00 ಗಂಟೆಗೆ.
ಟೆಂಡರ್ ದಾಖಲಾತಿಗಳನ್ನು ಆನ್‌ಲೈನ್ (e-procurement portal, https://eproc.karnataka.gov.in) ವೆಬ್‌ಪೋರ್ಟಲ್‌ನಲ್ಲಿ ದಿನಾಂಕ: 10-01-2019 ರಿಂದ ಪಡೆಯಬಹುದು.
ಹೆಚ್ಚಿನ ವಿವರಗಳಿಗಾಗಿ e-procurement portal, https://eproc.karnataka.gov.in ಅಥವಾ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯರವರ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂಖ್ಯೆ: 08232-224195.
ಸಹಿ/-
ಕಾರ್ಯಪಾಲಕ ಅಭಿಯಂತರರು,
ಪಂ.ರಾ.ಇಂ.ವಿಭಾಗ, ಮಂಡ್ಯ
DIPR/MND/RO 21/18-19/oysters